ಕೇಳಿದಾಗ, ಅವರೂ ಸಹ ಅದನ್ನೇ ಹೇಳಿದರು. ಯಾವುದೇ ಮಾಹಿತ ಇದ್ದರೂ ಅದನ್ನು ಸದನದ ಮುಂದಿಡುತ್ತೇನೆ. ಇದರಲ್ಲಿ ಮುಚ್ಚುಮರೆ ಏನೂ ಇಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ತಮ್ಮ ಬಗ್ಗೆ ಆರೋಪ ಮಾಡುತ್ತಿಲ್ಲ. ಪ್ರಶ್ನೆ ಕೇಳಿದಂಥ ಉದ್ದೇಶವೇನೆಂದರೆ, ಇತ್ತೀಚಿನ ದಿವಸಗಳಲ್ಲಿ ನನಗೆ ತಿಳಿದು ಬಂದಿರುವಂಥಾದ್ದು ಏನೆಂದರೆ, 4-6ವರ್ಷಗಳಿಂದ ಹಣದ ಬಾಕಿ ಪಟ್ಟಿ ಇಟ್ಟಿರುವಂಥಾದ್ದು ಹಾಗೆಯೇ ಮುಚ್ಚಿ ಹೋಗುತ್ತಿದೆಯೆಂಬ ಸುದ್ದಿ ಇದೆ. ಏಕೆಂದರೆ. ಇದು ಕಾನೂನಿನ ಪ್ರಶ್ನೆಯಾಗಿರುವುದರಿಂದ, ಅದರ ಬಗ್ಗೆ ಮಾತನಾಡಿ ಕಾನೂನು ರೀತ್ಯ ವಿವರ ಕೊಡುವುದಕ್ಕೆ ದಾಖಲಾತಿಗಳಿಲ್ಲ. ಅದಕ್ಕೋಸ್ಕರ ತಮ್ಮ ಮೂಲಕ ಮುಖ್ಯಮಂತ್ರಿಗಳನ್ನು ಕೇಳುತ್ತಿರುವುದೇನೆಂದರೆ, ಮತ್ತೊಮ್ಮೆ ಅದರ ಪಟ್ಟಿಯನ್ನು ತರಿಸಿಕೊಡುವ ವ್ಯವಸ್ಥೆ ಮಾಡಿ. ಮತ್ತು ಕೊನೆಯ ಪಕ್ಷ ಸಚಿವರು ತಮ್ಮ ಅವಧಿ ಮುಗಿದ ಬಳಿಕ ಪೀಠೋಪಕರಣಗಳನ್ನು ತಮ್ಮ ಜೊತೆ ಸಾಗಿಸುತ್ತಿರುವುದರ ಬಗ್ಗೆ ಇನ್ನು ಮುಂದಾದರೂ ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳುವುದಕ್ಕೆ ವ್ಯವಸ್ಥೆ ಮಾಡುತ್ತೀರೋ?

ಶ್ರೀ ಹೆಚ್.ಡಿ. ದೇವೇಗೌಡ ಇದಕ್ಕೆ ಕಾನೂನು ಇದೆ. ಏನೆಂದರೆ ಉಪಯೋಗಿಸಲಾದ ಉಪಕರಣಗಳನ್ನು ಸರ್ಕಾರಕ್ಕೆ ಇಂತಿಷ್ಟು ಪರ್ಸೆಂಟೇಜ್ ಕೊಟ್ಟು ತೆಗೆದುಕೊಂಡು ಹೋಗುವಂಥ ವ್ಯವಸ್ಥೆ ಇದೆ. ಈ ಕಾನೂನನ್ನು ಬದಲಾಯಿಸಲು ನನ್ನದೇನೂ ತಕಾರಾರಿಲ್ಲ.ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳುತ್ತೇನೆ.ಏನೆಂದರೆ ಸಚಿವರು.ತಮ್ಮ ಅವಧಿ ಮುಗಿಸಿ ತೆರಳಿದಾಗ ಅವರ ಮನೆಯಲ್ಲಿ ಕೆಲವು ವಸ್ತುಗಳು ಕಡಿಮೆ ಇರುತ್ತದೆ. ಮತ್ತೆ ಕೆಲವು ಸಾಮಾನುಗಳು ಇರುವುದಿಲ್ಲ. ಇದಕ್ಕೆ ನಾವು ಹಣವನ್ನು ವಸೂಲು ಮಾಡದೆ ಏನು ಮಾಡಬೇಕು? ಇನ್ನು ಕೆಲವು ವಸ್ತುಗಳು ಹಾಳಾಗಿರುತ್ತವೆ., ಕೆಲವು ವಸ್ತುಗಳಿಗೆ ವಸೂಲು ಮಾಡಬೇಕಾಗುತ್ತದೆ. There are certain procedures. ಸನ್ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ್ದನ್ನು ಒಪ್ಪಿಕೊಳ್ಳುತ್ತೇನೆ. ನಾವೆಲ್ಲರೂ ಸರ್ಕಾರದ ಚುನಾಯಿತ ಪ್ರತಿನಿಧಿಗಳಾಗಿದ್ದು, ಜವಾಬ್ದಾರಿ ಸ್ಥಾನದಲ್ಲಿರುವವರು, ಸರ್ಕಾರಕ್ಕೆ ಕೊಡಬೇಕಾದ ಬಾಕಿ ಹಣವೇನಿದೆ. ಇದನ್ನು ನಾವೇ ಅರ್ಥ ಮಾಡಿಕೊಂಡು ಕೊಡುವುದಕ್ಕೆ ಪ್ರಯತ್ನಿಸಬೇಕು. ಕಾನೂನು ರೀತ್ಯ ಕ್ರಮ ತೆಗೆದುಕೊಳ್ಳುವುದು ಅನಂತರ. ಚುನಾಯಿತ ಪ್ರತಿನಿಧಿಗಳಾಗಿ ನಾವು ಇತರರಿಗೆ ಮಾರ್ಗದರ್ಶಕರಾಗಿರುವ ಅವಶ್ಯಕತೆಯಿದೆ. ಆದುದರಿಂದ ಇದರ ಬಗ್ಗೆ ಯಾರಿಗೂ ತಪ್ಪು ಅಭಿಪ್ರಾಯಕ್ಕೆ ನಾನು ಅನ್ಯಥಾ ಅವಕಾಶ ಕೊಡದೆ ಇಂತಹ ಸೂಕ್ಷ್ಮ ವಿಷಯದಲ್ಲಿ ಅವರೆಲ್ಲರೂ ಸರಿಯಾಗಿ ನಡೆದುಕೊಳ್ಳುವುದು ಸೂಕ್ತವೆಂದು ನಾನು ವಿನಂತಿಸಿ ಕೊಳ್ಳುತ್ತೇನೆ.

ಕೇಂದ್ರ ಕಾರಾಗೃಹದಲ್ಲಿ ಹತ್ಯೆ ಪ್ರಕರಣ.

654 - ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಕಾರಾಗೃಹಗಳ ರಾಜ್ಯಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಮೇ. 3, 1995ರಂದು ಬೆಂಗಳೂರು ಕೇಂದ್ರ ಕಾರಾಗೃಹದಲ್ಲಿ ರೌಡಿಯೊಬ್ಬನ ಭೀಕರ ಹತ್ಯೆ ನಡೆದಿರುವುದು ನಿಜವೇ?*

ಆ) *ಈ ಸಂದರ್ಭದಲ್ಲಿ ಗೃಹ ಮತ್ತು ಸಾರಿಗೆ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳಿಂದ ವಿಚಾರಣೆ ನಡೆಸಿ ಸರ್ಕಾರ ವರದಿ ತರಿಸಿಕೊಂಡಿರುವುದು ನಿಜವಲ್ಲವೇ?*

ಇ) *ಹಾಗಿದ್ದಲ್ಲಿ ಈ ವರದಿಯ ಸಾರಾಂಶವೇನು?*

ಈ) *ಸದರಿ ವರದಿಯಲ್ಲಿ ಶಿಫಾರಸ್ಸು ಮಾಡಿರುವ ಪ್ರಕಾರ 9 ಜನ ಸಿಬ್ಬಂದಿ ವರ್ಗದವರನ್ನು ಅಮಾನತ್ತಿನಲ್ಲಿಟ್ಟಿರುವುದು ನಿಜವೇ?*

ಉ) ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಜೈಲಿನ ಹಿರಿಯ ಅಧೀಕ್ಷಕರು ಹಾಗೂ ಮುಖ್ಯ ಜೈಲರ್‌ನ ಮೇಲೆ ಯಾವುದೇ ಕ್ರಮ ಕೈಗೊಳ್ಳದೆ ಅವರನ್ನು ಬೇರೆ ಸ್ಥಳಕ್ಕೆ ವರ್ಗ ಮಾಡಿರುವುದಕ್ಕೆ ಕಾರಣವೇನು?

ಊ) ಈ ಹಿಂದೆ ಜೈಲಿನಲ್ಲಿ ಮಾದಕ ವಸ್ತುಗಳ ಮಾರಾಟದ ಪ್ರಕರಣದಲ್ಲಿಯೂ ಸಹ ಮೇಲ್ಕಂಡ ಇಬ್ಬರೂ ಮೇಲೂ ಯಾವುದೇ ಕ್ರಮ ಕೈಗೊಳ್ಳದಿರುವುದು ಹಾಗೂ ಮೇ 3ರ ಘಟನೆ ನಡೆದ ಮೇಲೂ ಇವರ ಮೇಲೆ ಯಾವುದೇ ಶಿಸ್ತಿನ ಕ್ರಮ ಕೈಗೊಳ್ಳದಿರಲು ಕಾರಣವೇನು?

ಶ್ರೀ ಎನ್. ಮಿರಾಜುದ್ದೀನ್ ಪಾಟೀಲ್ (ಕಾರಾಗೃಹಗಳ ರಾಜ್ಯ ಸಚಿವರು):

ಅ) ಹೌದು

ಆ) ಹೌದು

ಇ) ಅನುಬಂಧ -ಎ ನಲ್ಲಿ ನೀಡಲಾಗಿದೆ.

ಈ) ಹೌದು

ಉ) ವಿಚಾರಣಾ ವರದಿಯಲ್ಲಿ ಜೈಲಿನ ಅಧೀಕ್ಷಕರು ಪರ್ಯಾಯವಾಗಿ ಹೊಣೆಗಾರರೆಂದು ತಿಳಿಸಲಾಗಿದೆ. ಆದ್ದರಿಂದ ಮೇಲೆ ಹೇಳಿದ 9 ಜನರ ಜೊತೆಗೆ ಅವರನ್ನೂ ಸೇರಿಸಿ ಜಂಟಿ ಇಲಾಖಾ ತನಿಖೆಗೆ ಆದೇಶಿಸಲಾಗಿದೆ. ಮುಖ್ಯ ಜೈಲರ್ ವಿರುದ್ಧ ವಿಚಾರಣಾ ವರದಿಯಲ್ಲಿ ಆರೋಪಗಳಿಲ್ಲ. ಆದರೂ ಕೇಂದ್ರ ಕಾರಾಗೃಹದ ಎಲ್ಲರನ್ನೂ ವರ್ಗಾಯಿಸಬೇಕೆಂಬ ಶಿಫಾರಸಿನನ್ವಯ ಇಬ್ಬರನ್ನು ವರ್ಗಾಯಿಸಲಾಗಿದೆ.

ಊ) ಮಾದಕ ವಸ್ತುಗಳ ಮಾರಾಟದ ಪ್ರಕಾರಣದಲ್ಲಿ ಮುಖ್ಯ ಜೈಲರ್ ಆಗಿದ್ದ ಶ್ರೀ ತನ್ವೀರ್ ಅಹ್ಮದ್ ಅವರನ್ನು ಅಮಾನತ್ತಿನಲ್ಲಿಡಲಾಗಿತ್ತು ಹಾಗೂ ಇಲಾಖಾ ತನಿಖೆಯನ್ನು ಆದೇಶಿಸಲಾಗಿತ್ತು. ಅದು ಜಾರಿಯಲ್ಲಿದೆ. ಆಗಿನ ಅಧೀಕ್ಷಕರಾಗಿದ್ದ ಶ್ರೀ ಎನ್. ಜಯರಾಮಯ್ಯ ನವರ ವಿರುದ್ಧ ಆರೋಪಗಳು ಇರಲಿಲ್ಲ. ಆದ್ದರಿಂದ ಶಿಸ್ತಿನ ಕ್ರಮ ಕೈಗೊಳ್ಳಲಿಲ್ಲ.

ಅನುಬಂಧ - ಎ

1. 1995ರ ಮೇ 3 ರಂದು ಬೆಂಗಳೂರಿನ ಸೆಂಟ್ರಲ್ ಜೈಲಿನಲ್ಲಿ ವಿಚಾರಣಾಧೀನ ಖೈದಿಯಾಗಿದ್ದ ಬಲರಾಂ ಎಂಬ ಹೆಸರಿನ ಒಬ್ಬ ಕುಖ್ಯಾತ ರೌಡಿಯನ್ನು ಅದೇ ಜೈಲಿನಲ್ಲಿ 4 ಜನ ವಿಚಾರಣಾಧೀನ ಖೈದಿಗಳು ಚೂರಿಯಿಂದ ಹತ್ಯೆ ಮಾಡಿದರು. ಅವರೂ ಸಹ ಬೇರೆ ಗುಂಪಿಗೆ ಸೇರಿದ ರೌಡಿಗಳಾಗಿದ್ದಾರೆ. ಬಲರಾಮನು ಹತ್ಯೆಯಿಂದ ಆದ ಗಾಯಗಳಿಂದ ಮರಣ ಹೊಂದಿದನು. 3ನೇ ಮೇ 1995ರಂದು ಬೆಂಗಳೂರಿನ ಸೆಂಟ್ರಲ್ ಜೈಲಿನಲ್ಲಿ ನಡೆದ ಈಘಟನೆಯ ಬಗೆಗೆ ವಿಚಾರಣೆಯನ್ನು ನಡೆಸಲು ಸರ್ಕಾರವು 4ನೇ ಮೇ 1995ರಂದು ತನ್ನ ಆದೇಶ ಸಂಖ್ಯೆ : ಹೆಚ್‌ಡಿ 65 ಪಿಆರ್‌ಇ 95 ಇವರ ಮೂಲಕ ಆದೇಶಿಸಿದೆ. ಹಾಗೂ ಒಳಾಡಳಿತ ಮತ್ತು ಸಾರಿಗೆ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರಾದ ಶ್ರೀ ಎನ್.ಎ. ಮುತ್ತಣ್ಣ, ಐ.ಎ.ಎಸ್. ಇವರಿಗೆ ವಿಚಾರಣೆಯನ್ನು ನಡೆಸಲು ಮಹಿಸಿದೆ (ಇದರ ನಂತರ 'ವಿಚಾರಣಾಧಿಕಾರಿಗಳು' ಎಂದು ಕರೆಯಲಾಗಿದೆ)

2. ವಿಚಾರಣಾಧಿಕಾರಿಗಳು ತದನಂತರ ವಿಚಾರಣೆಯನ್ನು ನಡೆಸಿದ್ದಾರೆ ಹಾಗೂ 02-06-1995ರಂದು ಸರ್ಕಾರಕ್ಕೆ ವರದಿಯನ್ನು ಸಲ್ಲಿಸಿದ್ದಾರೆ.

3. ವಿಚಾರಣಾಧಿಕಾರಿಗಳು ಬೆಂಗಳೂರಿನ ಸೆಂಟ್ರಲ್ ಜೈಲಿನ ಸ್ಥಳ ಹಾಗೂ ಸುತ್ತಮುತ್ತಲಿನ ಭಾಗಗಳನ್ನು ತನಿಖೆ ಮಾಡಿದ್ದಾರೆ ಹಾಗೂ ಜೈಲಿನ ವಿವಿಧ ಚಟುವಟಿಕೆಗಳನ್ನು ವಿವರವಾಗಿ ಅಭ್ಯಾಸಿಸಿದ್ದಾರೆ. ಹಾಗೂ ಜೈಲಿನ ಕೈಪಿಡಿ ಹಾಗೂ ಸಂಬಂಧಿಸಿದ ನಿಯಾಮಾಳಿಗಳನ್ನು ಪರಿಶೀಲಿಸಿದ್ದಾರೆ. ಅವರು ಜೈಲಿನ ನಕ್ಷೆಯನ್ನು ತಯಾರು ಮಾಡಿಸಿದ್ದು, ಜೈಲಿನ ವಿವಿಧ ಭಾಗಗಳ ಛಾಯಚಿತ್ರಗಳನ್ನು ತೆಗೆಸಿದ್ದಾರೆ. ಈ ಛಾಯಚಿತ್ರಗಳು ಹಾಗೂ ಜೈಲಿನ ನಕ್ಷೆ ಅವರ ವರದಿಯ ಒಂದು ಭಾಗವಾಗಿದೆ. ವಿಚಾರಣೆಯ ಕಾಲದಲ್ಲಿ ಅವರು 23ಜನ ಸಾಕ್ಷಿಗಳನ್ನು ವಿಚಾರಣೆಗೆ ಒಳಪಡಿಸಿದ್ದಾರೆ. ಅವರಲ್ಲಿ ಬಲರಾಮನ ಜೈಲಿನ ಕೊಠಡಿಯಲ್ಲಿದ್ದರೂ ಹಾಗೂ 4 ಜನ ಹತ್ಯೆ ಮಾಡಿದವರೂ ಮತ್ತು ಈ ಘಟನೆ ನಡೆದ ಕಾಲಕ್ಕೆ ಕರ್ತವ್ಯದ ಮೇಲಿದ್ದ ಜೈಲಿನ ಸಿಬ್ಬಂದಿ ವರ್ಗದವರೂ ಹಾಗೂ ಇತರರು ಸೇರಿದ್ದಾರೆ. ಅವರ ಹೇಳಿಕೆಗಳು ವಿಚಾರಣಾ ವರದಿಯ ಭಾಗವಾಗಿದೆ. ವಿಚಾರಣಾಧಿಕಾರಿಗಳು ಹೊಸದಾಗಿ ನಿರ್ಮಾಣವಾಗುತ್ತಿರುವ ಪರಸ್ಪರ ಅಗ್ರಹಾರದಲ್ಲಿರುವ ಹೊಸ ಸೆಂಟ್ರಲ್ ಜೈಲಿಗೂ ಭೇಟಿ ನೀಡಿದ್ದಾರೆ. ಹಾಗೂ ಅನೇಕ ಸಲಹೆಗಳನ್ನು ನೀಡಿದ್ದಾರೆ. ಅವು ವಿಚಾರಣಾ ವರದಿಯ ಭಾಗಗಳಾಗಿವೆ.

4. ಸರ್ಕಾರವು ಈ ವಿಚಾರಣೆಯಲ್ಲಿ ಪರಾಮರ್ಶೆಗಾಗಿ ಸಮಸ್ಯೆಗಳನ್ನು ಪಟ್ಟ ಮಾಡಿಲ್ಲ. ಆದರೂ ವಿಚಾರಣಾಧಿಕಾರಿಗಳು ಈ ಕೆಳಗೆ ಹೇಳಿದ ವಿಷಯಗಳನ್ನು ವಿವರವಾಗಿ ಚರ್ಚಿಸಿದ್ದಾರೆ.

   i) ಚೂರಿಗಳು (ಮಾರಕಾಸ್ತ್ರಗಳು) ಜೈಲಿನ ಒಳಗೆ ಹೇಗೆ ಬಂದವು?

   ii) ಬಲರಾಮನಿಗೆ ಅವನ ಹಿನ್ನೆಲೆಯ ಕಾರಣದಿಂದಾಗಿ ಸಾಕಷ್ಟು ಭದ್ರತೆಯನ್ನು ಒದಗಿಸಲಾಗಿತ್ತೆ?

   iii) ಈ ಘಟನೆಗೆ ಸಂಬಂಧಿಸಿದಂತೆ ಕೇಂದ್ರ ಕಾರಾಗೃಹದ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರಿಂದ ಏನಾದರೂ ಲೋಪಗಳು ಘಟಿಸಿವೆಯೇ??

   iv) ಬೆಂಗಳೂರಿನಲ್ಲಿರುವ ಕೇಂದ್ರ ಕಾರಾಗೃಹವು ಎಷ್ಟರ ಮಟ್ಟಿಗೆ ಸುರಕ್ಷಿತ ಹಾಗೂ ಭದ್ರವಾಗಿದೆ?

   v) ಕೇಂದ್ರ ಕಾರಾಗೃಹದ ಸದ್ಯದ ಸ್ಥಿತಿಗಳನ್ನು ಸುಧಾರಣೆ ಮಾಡಲು ಯಾವ ಮಾರ್ಗೋಪಾಯಗಳನ್ನು ಕೈಗೊಳ್ಳಬೇಕು?

5. ಜೈಲಿನ ಪಕ್ಕದಲ್ಲಿ ನಿರ್ಮಾಣ ಹಂತದಲ್ಲಿರುವ ಕಟ್ಟಡಗಳ ಮೇಲಿಂದ ಚೂರಿಗಳನ್ನು ಎಸೆದಿರಬಹುದಾದ ಸಾಧ್ಯತೆಯನ್ನು ವಿಚಾರಣಾಧಿಕಾರಿಗಳು ಅಲ್ಲಗಳೆದಿದ್ದಾರೆ ಹಾಗೂ ಸಂದರ್ಶನದ ವೇಳೆಯಲ್ಲಿ ಹಲ್ಲೆ ಮಾಡಿದ ರೌಡಿಗಳಿಗೆ ಅವುಗಳನ್ನು ಕೊಟ್ಟಿರಬಹುದಾದ ಸಾಧ್ಯತೆಯನ್ನು ಅವರು ಅಲ್ಲಗಳೆದಿದ್ದಾರೆ. ಜೈಲಿನ ಸಿಬ್ಬಂದಿಯು ಸಕ್ರಿಯವಾಗಿ ಪಾಲ್ಗೊಂಡು ಚೂರಿಗಳನ್ನು ಜೈಲಿನ ಒಳಗಡೆಗೆ ತಂದು ರೌಡಿಗಳಿಗೆ ಕೊಟ್ಟಿರಬಹುದಾದ ಸಾಧ್ಯತೆಯನ್ನು ಸಹ ಅವರು ಅಲ್ಲಗಳೆದಿದ್ದಾರೆ ಮತ್ತು ಅಪಾದಿತನಾದ ಬ್ಯಾಕ್ ಹೈವ್ ರಾಜನನ್ನು ನ್ಯಾಯಾಲಯಕ್ಕೆ ಕರೆದುಕೊಂಡು ಹೋಗಿದ್ದಾಗ ಚೂರಿ ಗಳನ್ನು ಅವನಿಗೆ ಕೊಡಲಾಯಿತೆಂದೂ ಹಾಗೂ ಜೈಲಿನ ಮುಖ್ಯ ದ್ವಾರದಲ್ಲಿ ಕರ್ತವ್ಯದಲ್ಲಿದ್ದ ಸಿಬ್ಬಂದಿಯ ಅಜಾಗರೂಕತೆಯ ಫಲವಾಗಿ ಮುಖ್ಯ ದ್ವಾರದಿಂದಲೇ ಅವನು ಅವುಗಳನ್ನು ಜೈಲಿನ ಒಳಗಡೆಗೆ ಕೊಂಡೊಯ್ದನೆಂದೂ ವಿಚಾರಣಾಧಿಕಾರಿಗಳು ಖಚಿತ ಅಭಿಪ್ರಾಯಕ್ಕೆ ಬಂದಿದ್ದಾರೆ.

6. ಜೈಲಿನ ಸುತ್ತಲೂ ಇರುವ ಗೋಡೆಗಳಿಂದಾಗಿ ಹಾಗೂ ಜೈಲಿನ ಗೋಡೆಯ ಒಳಗಡೆ ಚಾಚಿರುವ ಎತ್ತರವಾದ ಗಿಡಗಳಿಂದಾಗಿಯೂ ಬೆಂಗಳೂರು ಕೇಂದ್ರ ಕಾರಾಗೃಹವು ಎಷ್ಟೊಂದು ಅಭದ್ರವಾಗಿದೆ ಎಂಬುದನ್ನು ವಿಚಾರಣಾಧಿಕಾರಿಗಳು

ವಿವರವಾಗಿ ವರ್ಣಿಸಿದ್ದಾರೆ. ಜೈಲಿನಲ್ಲಿ ರಾತ್ರಿ ವೇಳೆಯಲ್ಲಿರುವ ಅಸಮರ್ಪಕ ಬೆಳಕಿನ ವ್ಯವಸ್ಥೆಯನ್ನು ಅವರು ಎತ್ತಿ ತೋರಿಸಿದ್ದಾರಲ್ಲವೇ ಅತ್ಯಂತ ದಟ್ಟನೆಯಿಂದ ಕೂಡಿದ ಜೈಲಿನ ವ್ಯವಸ್ಥೆಗಾಗಿ ಇರುವ ಸಿಬ್ಬಂದಿಯ ಕೊರತೆಯ ಕಡೆಗೂ ಗಮನ ಸೆಳೆದಿದ್ದಾರೆ. ನೀರಿನ ಕೊರತೆಯಿಂದಾಗಿ ಜೈಲಿನ ಅಧಿಕಾರಿಗಳು ಅತ್ಯಂತ ಹೆಚ್ಚು ಸಂಖ್ಯೆಯಲ್ಲಿ ಖೈದಿಗಳನ್ನು ಸ್ನಾನಕ್ಕಾಗಿ ಒಂದೇ ಸಲ ಹೊರಗೆ ಬಿಡಬೇಕಾಗಿ ಬಂದಿರುವ ಪರಿಸ್ಥಿತಿಯನ್ನು ಅವರು ವಿವರವಾಗಿ ವರ್ಣಿಸಿದ್ದಾರೆ. ಅದರಿಂದಾಗಿ ಉಂಟಾಗುವ ಜಾತ್ರೆಯಂತಹ ಸನ್ನಿವೇಶವನ್ನು ಎತ್ತಿತೋರಿಸಿದ್ದಾರೆ. ಅಂತಹ ಸನ್ನಿವೇಶವನ್ನು ಅವನ ಜೈಲಿನ ಕೋಣೆಯಲ್ಲಿಯೇ ಹತ್ಯೆ ಮಾಡಲು ಆಕ್ರಮಣಕಾರರಿಗೆ ಸದವಕಾಶವನ್ನು ಒದಗಿಸಿತೆಂದೂ ಅವರು ತಿಳಿಸಿದ್ದಾರೆ.

7. ಜೈಲಿನ ಅಧಿಕಾರಿಗಳು ಬಲರಾಮನಿಗೆ ಅವನ ಹಿನ್ನೆಲೆಯಿಂದಾಗಿ ಸರಿಯಾದ ಭದ್ರತೆಯನ್ನು ಒದಗಿಸಲು ವಿಫಲರಾಗಿದ್ದರೆಂದು ವಿಚಾರಣಾಧಿಕಾರಿಗಳು ಎತ್ತಿ ತೋರಿಸಿದ್ದಾರೆ. ಅವನನ್ನು ಬೇಗ ಹಾಕಿ ಇಡಬೇಕಾದ ಮುಂಜಾಗ್ರತೆಯನ್ನು ತೆಗೆದುಕೊಳ್ಳಲಿಲ್ಲವೆಂದೂ ಹಾಗೂ ಓರ್ವ ವಾರ್ಡರ್‌ನನ್ನು ಕಾವಲಿಗಾಗಿ ಇಡುವ ವ್ಯವಸ್ಥೆಯನ್ನು ಮಾಡಲಿಲ್ಲವೆಂದೂ ಅವರು ವರದಿಯಲ್ಲಿ ಹೇಳಿದ್ದಾರೆ.

8. ಬಲರಾಮನಿಗೆ ಅವಶ್ಯವಿದ್ದ ಭದ್ರತೆಯನ್ನು ಒದಗಿಸಲು ವಿಫಲರಾದ ಸಿಬ್ಬಂದಿ ವರ್ಗದವರನ್ನು ವಿಚಾರಣಾಧಿಕಾರಿಗಳು ಈ ಕೆಳಗಿನಂತೆ ಹೆಸರಿಸಿದ್ದಾರೆ :

i) ಶ್ರೀ ಗೋವಿಂದಪ್ಪ, ಸಹಾಯಕ ಅಧೀಕ್ಷಕರು.

ii) ಶ್ರೀ ಗುರುಲಿಂಗಸ್ವಾಮಿ ಸಹಾಯಕ ಅಧೀಕ್ಷಕರು

iii) ಶ್ರೀ ಎಂ. ಸುಂದರ, ಬೀಗ ತೆಗೆಯುವ ಜೈಲರ್

iv) ಶ್ರೀ ಲಕ್ಷ್ಮೀನಾರಾಯಣಪ್ಪ, ಡ್ಯೂಟಿ ಜೈಲರ್

v) ಶ್ರೀ ಸಿ. ನಾರಾಯಣಪ್ಪ, ಹೆಡ್ ವಾರ್ಡರ್

29-4-1995ರಂದು ಮುಖ್ಯ ದ್ವಾರದಲ್ಲಿ ಕರ್ತವ್ಯದ ಮೇಲಿದ್ದ ವಾರ್ಡರ್‌ಗಳು, ಜೈಲರ್‌ಗಳು ಹಾಗೂ ಹತ್ಯೆ ನಡೆಸಿದವರನ್ನು ಬಂಧನದಲ್ಲಿಟ್ಟ ಬ್ಯಾರಕುಗಳ ನಿರ್ವಹಣೆಯ ಕರ್ತವ್ಯದ ಮೇಲಿದ್ದ ವಾರ್ಡರುಗಳು ಮತ್ತು ಕಾರ್ಯಕಾರಿ ಸಹಾಯಕರ ಅಧೀಕ್ಷಕರೂ ಸಹ ಕರ್ತವ್ಯಚ್ಯುತಿ ಮಾಡಿದ್ದಾರೆಂದು ವಿಚಾರಣಾಧಿಕಾರಿಗಳು ತಮ್ಮ ವರದಿಯಲ್ಲಿ ತಿಳಿಸಿದ್ದಾರೆ. ಅವರೆಂದರೆ :

i) ಶ್ರೀ ಸಿದ್ದೇಗೌಡ, ಗೇಟ್ ಕೀಪರ್

ii) ಶ್ರೀ ಸಿ.ಪಿ. ದೊಡ್ಡೇಗೌಡ ಜೈಲರ್

iii) ಶ್ರೀ ಕೆ.ಎಸ್. ಗಂಗಶೆಟ್ಟಿ. ವಾರ್ಡರ್

iv) ಶ್ರೀ ಪಿ.ಎಸ್. ಸಂಜೀವ, ವಾರ್ಡರ್

ಜೈಲಿನ ಸೂಪರಿಂಟೆಂಡೆಂಟ್‌ರವರನ್ನು ವಿಚಾರಣಾಧಿಕಾರಿಗಳು ಈ ಘಟನೆಗೆ ಪರ್ಯಾಯವಾಗಿ ಹೊಣೆಗಾರರೆಂದು ತೀರ್ಮಾನಿಸಿದ್ದಾರೆ.

9. ವಿಚಾರಣಾಧಿಕಾರಿಗಳು ಅನೇಕ ಸಲಹೆಗಳನ್ನು ನೀಡಿದ್ದು, ಅವುಗಳಲ್ಲಿ ಮಹತ್ವವಾದವುಗಳು ಹೀಗಿವೆ:

i) ಬೆಂಗಳೂರು ಸೆಂಟ್ರಲ್ ಜೈಲಿನಲ್ಲಿ ಕೆಲಸದಲ್ಲಿರುವ ಎಲ್ಲಾ ಸಿಬ್ಬಂದಿ ವರ್ಗದವರನ್ನು ತಕ್ಷಣದಿಂದಲೇ ಅಲ್ಲಿಂದ ವರ್ಗಾಯಿಸಬೇಕು,

ii) ಕೇಂದ್ರ ಕಾರಾಗೃಹಕ್ಕೆ ಸರಿಯಾದ ನೀರಿನ ವ್ಯವಸ್ಥೆಯನ್ನು ತಕ್ಷಣದಿಂದಲೇ ಮಾಡಬೇಕು ಹಾಗೂ ಸ್ನಾನಕ್ಕಾಗಿ ಹೆಚ್ಚು ಸಂಖ್ಯೆಯಲ್ಲಿ ಖೈದಿಗಳನ್ನು ಒಂದೇ ಬಾರಿ ಹೊರಕ್ಕೆ ಬಿಡುವ ವ್ಯವಸ್ಥೆಯನ್ನು ನಿಲ್ಲಿಸಬೇಕು.,

iii) ಬೆಳಕಿನ ವ್ಯವಸ್ಥೆಯನ್ನು ಕೂಡಲೇ ಸುಧಾರಿಸಬೇಕು,

iv) ಪರಸ್ಪರ ಅಗ್ರಹಾರದಲ್ಲಿ ನಿರ್ಮಾಣದ ಹಂತದಲ್ಲಿರುವ ಜೈಲಿನ ಸಿಬ್ಬಂದಿ ವರ್ಗದ ವಸತಿಗೃಹಗಳನ್ನು 2-3 ತಿಂಗಳಲ್ಲಿ ವಾಸಕ್ಕೆ ಯೋಗ್ಯವಾಗುವಂತೆ ಮಾಡಬೇಕು ಹಾಗೂ ಅದಕ್ಕಾಗಿ 6 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಬೇಕು. ಜೈಲಿನ ಸಿಬ್ಬಂದಿ ವರ್ಗವನ್ನು ಹೊಸ ವಸತಿಗೃಹಗಳಿಗೆ ಕೂಡಲೇ ವರ್ಗಾಯಿಸಬೇಕು, ಕೆಲಸದ ಸ್ಥಳಗಳಿಗೆ ಹಾಗೂ ಇತರ ಕಾರಣಗಳಿಗೆ ಹೋಗಿ ಬರಲು ಸಿಬ್ಬಂದಿವರ್ಗದವರಿಗೆ ಇಲಾಖೆಯಿಂದಲೇ ಬಸ್ಸಿನ ವ್ಯವಸ್ಥೆಯನ್ನು ಮಾಡಬೇಕು.

v) ಶಾಲಾ ಕಟ್ಟಡವು ಪೂರ್ತಿಗೊಂಡಿದ್ದು ಅದನ್ನು ಕೂಡಲೇ ಪ್ರಾರಂಭಿಸಲು ಕ್ರಮ ಕೈಗೊಳ್ಳಬೇಕು. ಅದರಿಂದ ಜೈಲಿನ ಸಿಬ್ಬಂದಿಯ ಮಕ್ಕಳಿಗೆ ಶಾಲೆಯ ವ್ಯವಸ್ಥೆಯನ್ನು ದೊರಕಿಸಿದಂತಾಗುತ್ತದೆ, ಹಾಗೂ

vi) ನಿರ್ಮಾಣವಾಗುತ್ತಿರುವ ಹೊಸ ಜೈಲನ್ನು ಭಾಗಶಃ ಪೂರ್ಣಗೊಳಿಸಲು 2 ಕೋಟಿ ರೂಪಾಯಿಗಳನ್ನು ಕೂಡಲೇ ಒದಗಿಸಬೇಕು. ಹಾಗೂ 1 ನೇ ಏಪ್ರಿಲ್ 1996ರ ಒಳಗಾಗಿ ಹೊಸ ಜೈಲಿನ ಶಿಕ್ಷೆಯಾಗಿರುವ ಖೈದಿಗಳನ್ನು ಸ್ಥಳಾಂತರಿಸಬೇಕು.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ. ಇದು ಬಹಳ ಗಂಭೀರವಾದ ಪ್ರಶ್ನೆಯಾಗಿದ್ದು, ಜೈಲಿನೊಳಗೆ ಒಬ್ಬ ಖೈದಿಯ ಕೊಲೆಯಾಗಿದೆ. ಜೈಲು ಎನ್ನುವುದು ಅಲ್ಲಿ ಬಂಧಿತರಾಗಿರುವವರಿಗೆ ಎಲ್ಲಾ ರೀತಿಯ ರಕ್ಷಣೆ ಕೊಡತಕ್ಕಂಥಾದ್ದು. ಅಲ್ಲಿಂದ ಯಾರೂ ಕೂಡ ತಪ್ಪಿಸಿಕೊಂಡು ಹೋಗಬಾರದೆಂದು ಮತ್ತು ಅವರಿಗೆ ಏನೂ ಅನಾಹುತಾವಾಗಬಾರದೆನ್ನುವ ಸ್ಥಳವಾಗಿದೆ. ಬೆಂಗಳೂರಿನ ಕೇಂದ್ರ ಕಾರಾಗೃಹದಲ್ಲಿ ಒಬ್ಬ ಖೈದಿಯ ಕೊಲೆಯಾಗಬೇಕಾದರೆ. ಕಾರಣವೇನು? ಅಲ್ಲಿಯ ವ್ಯವಸ್ಥೆ ಏನು? ಆ ಜೈಲಿನಲ್ಲಿನ ವ್ಯವಸ್ಥೆ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು? ನನಗನ್ನಿಸುತ್ತದೆ: ತಮ್ಮ ಉತ್ತರದಲ್ಲಿ ತಿಳಿಸಿರುವಂತೆ ಖೈದಿ ಕೊಲೆಯ ಹಿನ್ನೆಲೆಯಲ್ಲಿ ಅಲ್ಲಿನ ನಾಲ್ಕು ಜನ ಪೇದೆಗಳನ್ನು ಅಮಾನತ್ತಿನಲ್ಲಿಡಲಾಗಿದೆಯೆಂದು ಹೇಳಿದ್ದೀರಿ. ಇದರಿಂದ ಸಮಸ್ಯೆ ಬಗೆಹರಿಯುವುದಿಲ್ಲ. ಇದರ ಬಗ್ಗೆ ತಾವು ಪ್ರಾಮಾಣಿಕರಾದ ಉನ್ನತಾಧಿಕಾರಿಗಳಿಗೆ ಶಹಭಾಷ್‌ಗಿರಿ ಕೊಟ್ಟು ಅಮಾಯಕರಾದ ನಾಲ್ಕು ಜನ ಪೇದೆಗಳನ್ನು ಅಮಾನತ್ತಿನಲ್ಲಿಟ್ಟಿದ್ದೀರಲ್ಲಾ. ಕಾರಣವೇನು? ಮತ್ತು ಕೊಲೆ. ಹಿಂದೆ ಏನಾದರೂ ರಾಜಕಾರಣ ಇದೆಯೇ ಎಂಬುದನ್ನು ಸ್ಪಷ್ಟಪಡಿಸಬೇಕು. ಈ ಕುರಿತ ವರದಿಯನ್ನು ನಾನು ಓದಿದೆ. ಅದರಲ್ಲಿ ಕೊಲೆಯ ಸಂಬಂಧವಾಗಿ ಐದು ಜನ ಪೇದೆಗಳನ್ನು ಅಮಾನತ್ತಿನಲ್ಲಿಟ್ಟಿದ್ದೇವೆಂದು ಹೇಳುತ್ತೀರಿ. ಇದರಿಂದ ಸಮಸ್ಯೆ ಬಗೆಹರಿಯುವುದಿಲ್ಲ. ನಿಮ್ಮಿಂದಾಯಿತು. ನೀವು ಮಾಡಿದಿರಿ ಎಂದು ನಾನು ಮಂತ್ರಿಗಳಿಗೆ ನೇರವಾಗಿ ಆರೋಪ ಮಾಡುತ್ತಿಲ್ಲ. ನೀವು ಜವಾಬ್ದಾರಿ ಸ್ಥಾನದಲ್ಲಿರುವವರು, ಇದರ ಬಗ್ಗೆ ತಾವು ಒಂದು ಕಡೆ ಪತ್ರಿಕಾ ಹೇಳಿಕೆ ನೀಡಿರುವುದನ್ನು ನೋಡಿದೆ. ಏನೆಂದರೆ, ಕೊಲೆಗೆ ಬಳಸಲಾದ ಚೂರಿ ಜೈಲಿನ ಗೋಡೆಯ ಮೇಲಿಂದ ಬಂದಿರಬಹುದೆಂದು ಹೇಳಿದ್ದೀರಿ. ವರದಿಯಲ್ಲಿ ಚೂರಿಯೂ ನೇರವಾಗಿ ಬಾಗಿಲಿನಿಂದಲೇ ಒಳಕ್ಕೆ ಹೋಗಿದೆ ಎಂದು ಇದೆ. ನೀವು ಇದರಲ್ಲಿ ಬಾಗೀದಾರರು ಎನ್ನತಕ್ಕ ಮಾತನ್ನು ನಾನು ಹೇಳುವುದಿಲ್ಲ ಆದರೆ ಈ ದಿಕ್ಕಿನಲ್ಲಿ ಪ್ರಾಮಾಣಿಕವಾಗಿ ಚಿಂತನೆ ಮಾಡೋಣ. ಇಲ್ಲಿರತಕ್ಕ ಉನ್ನತಾಧಿಕಾರಿಗಳ ಬಗ್ಗೆ ತಾವು ನೇರವಾಗಿ ಸ್ಪಷ್ಟಪಡಿಸಬೇಕು.

ಶ್ರೀ ಎನ್. ಮಿರಾಜುದ್ದೀನ್ ಪಟೇಲ್ : ಸನ್ಮಾನ್ಯ ಅಧ್ಯಕ್ಷರೆ. ಸನ್ಮಾನ್ಯರು ಕೇಳಿರತಕ್ಕ ಪ್ರಶ್ನೆಯ ಬಗ್ಗೆ ಹೇಳುವುದಾದರೆ, ಜೈಲಿನಲ್ಲೇನು ಕೊಲೆಯಾಗಿದೆ ಅದರ ಬಗ್ಗೆ ಗೃಹಕಾರ್ಯದರ್ಶಿಯವರಿಗೆ, ಮುಖ್ಯಮಂತ್ರಿಗಳು ತನಿಖೆ ಮಾಡಿ ವರದಿಯನ್ನು

ಕೊಡುವಂತೆ ಆದೇಶ ಮಾಡಿದ್ದಾರೆ ಗೃಹಕಾರ್ಯದರ್ಶಿಯವರು ಕೊಟ್ಟಿರುವ ವಿಚಾರಣಾ ವರದಿಯಲ್ಲಿ 6 ಜನರು ಇದರಲ್ಲಿ ಭಾಗಿಗಳಾಗಿದ್ದಾರೆಂದು ಹೇಳಿರುವ ಪ್ರಕಾರ, ಆ 6 ಜನರನ್ನು ಸಸ್‌ಪೆಂಡ್ ಮಾಡಿದ್ದೇವೆ. ಮತ್ತು ಆ ವರದಿಯಲ್ಲಿ ಅಲ್ಲಿದ್ದ ಎಲ್ಲಾ ಅಧಿಕಾರಿಗಳನ್ನು ವರ್ಗಾವಣೆ ಮಾಡಬೇಕೆಂದು ಇತ್ತು, ಅದರಂತೆ ಎಲ್ಲಾ ಅಧಿಕಾರಿಗಳ ವರ್ಗಾವಣೆಯನ್ನು ಸಹ ಮಾಡಿದ್ದೇವೆ. ಎರಡನೆಯದಾಗಿ. ಜೈಲಿನ ಹಿರಿಯ ಅಧೀಕ್ಷಕರು ಹಾಗೂ ಮುಖ್ಯ ಜೈಲರ್‌ನ ಮೇಲೆ ಏಕೆ ಕ್ರಮತೆಗೆದುಕೊಂಡಿಲ್ಲ, ಅವರನ್ನೇಕೆ ವರ್ಗಾವಣೆ ಮಾಡಿಲ್ಲವೆಂದು ಅವರ ಪ್ರಶ್ನೆ ಇದೆ. ವರದಿಯಲ್ಲಿ ಏನು ಎಲ್ಲಾ ಅಧಿಕಾರಿಗಳನ್ನು ವರ್ಗಾವಣೆ ಮಾಡಬೇಕೆಂದು ಸೂಚನೆ ಇತ್ತೊ, ಅದರ ಪ್ರಕಾರ ಜೈಲ್ ಸೂಪರಿಂಡೆಂಟ್‌ನ್ನು ಸಹ ವರ್ಗಾವಣೆ ಮಾಡಿದ್ದೇವೆ. ಮತ್ತು ಮುಂದೆ ಈ ರೀತಿಯಾಗಬಾರದೆಂದು ರಾಜ್ಯ ಮಟ್ಟದಲ್ಲಿ ಎಲ್ಲಾ ಅಧಿಕಾರಿಗಳನ್ನು ಕರೆಸಿ ಕಾನ್‌ಫರೆನ್ಸ್ ಮಾಡಿ, ಜೈಲಿನ ಐ.ಜಿ.ಪಿ, ಯವರಿಗೆ ಸೂಚನೆ ಕೊಟ್ಟು, ಎಲ್ಲೆಲ್ಲಿ ಈ ರೀತಿಯಾಗುತ್ತಿದೆ. ತಪ್ಪಾಗುತ್ತಿದೆ ಅದನ್ನು ಸುಧಾರಿಸಬೇಕು. ಮುಂದೆ ಈ ರೀತಿಯಾಗಬಾರದೆಂದು ಸೂಚನೆ ಕೊಟ್ಟಿದ್ದೇವೆ. ಮುಂದೆ ಈ ರೀತಿಯಾದ ಘಟನೆಗಳಾಗದಂತೆ ಕ್ರಮತೆಗೆದುಕೊಳ್ಳುತ್ತೇವೆಂದು ಅವರಿಗೆ ನಾನು ಆಶ್ವಾಸನೆಯನ್ನು ಕೊಡುತ್ತೇನೆ.

ಅಧ್ಯಕ್ಷರು : ಮಾನ್ಯ ವಾಟಾಳ್ ನಾಗರಾಜ್‌ರವರ ಹತ್ತಿರ ಇದರ ಬಗ್ಗೆ ಇನ್ನು ಏನಾದರೂ ಮಾಹಿತಿಗಳಿದ್ದರೆ. ಅದನ್ನು ಅವರಿಗೆ ಕೊಟ್ಟರೆ ಅವರು ಕ್ರಮ ಜರುಗಿಸುತ್ತಾರೆ. ಅವರು ಪ್ರಾಮಾಣಿಕರಾಗಿ ಉತ್ತರವನ್ನು ಕೊಟ್ಟಿದ್ದಾರೆ. ಆದ್ದರಿಂದ ನಾವು ಮುಂದಿನ ಪ್ರಶ್ನೆಗೆ ಹೋಗೋಣ.

ಶ್ರೀ ವಾಟಾಳ್ ನಾಗರಾಜ್ : ಅವರು ಪ್ರಾಮಾಣಿಕರಾಗಿರುವುದರಿಂದಲೇ ಜೈಲಿನಲ್ಲಿ ಕೊಲೆಯಾಯಿತು. ಅದರ ಬಗ್ಗೆ ನಾನು ಹೆಚ್ಚು ಹೇಳುವುದಿಲ್ಲ. ತಾವು ದಯಮಾಡಿ ಇದರ ಬಗ್ಗೆ ಇಲ್ಲಿ ಚರ್ಚೆಗೆ ಅವಕಾಶ ಮಾಡಿಕೊಡುತ್ತೀರೋ. ಮಾನ್ಯ ಮಂತ್ರಿಗಳು ಪ್ರಾಮಾಣಿಕರೆಂದು ತಾವು ಹೇಳಿದ ಮೇಲೆ ಅದರ ಬಗ್ಗೆ ನಾನು ಹೆಚ್ಚು ಮಾತನಾಡುವುದಿಲ್ಲ. ಅವರ ಪ್ರಾಮಾಣಿತಕತೆಯ ಬಗ್ಗೆ ನಾನು ಪ್ರಶ್ನೆ ಮಾಡುವುದಕ್ಕೆ ಹೋಗುವುದಿಲ್ಲ. ಏಕೆಂದರೆ ರಾಜಕೀಯದ ಅನೇಕ ಜನರು ಹೋರಾಟ ಮಾಡತಕ್ಕ ಸಮಯದಲ್ಲಿ ಜೈಲಿಗೆ ಹೋಗಬೇಕಾಗುತ್ತದೆ, ಬೇರೆ ಅನೇಕ ಜನರು ಒಳಗೆ ಹೋಗಬೇಕಾಗುತ್ತದೆ. ನಿಮ್ಮ ಜೈಲಿನಲ್ಲೇ ಕೊಲೆಯಾಗತಕ್ಕ ಪರಿಸ್ಥಿತಿಯಾದರೆ ಹೊರಗಡೆ ರಸ್ತೆಯಲ್ಲಿ ತಿರುಗಾಡುವ ಜನರ ಪರಿಸ್ಥಿತಿ ಏನು? ರಸ್ತೆಯಲ್ಲಿ ಓಡಾಡಲು ಆಗುವುದಿಲ್ಲ. ಆದ್ದರಿಂದ ತಾವು ಇದರ ಬಗ್ಗೆ ಸಮಗ್ರವಾಗಿ ಚರ್ಚೆ ಮಾಡಲು ಒಂದು ಅವಕಾಶವನ್ನು ಕೊಡಬೇಕು.

ಅಧ್ಯಕ್ಷರು : ನಿಮ್ಮೆಲ್ಲರ ಜೊತೆಯಲ್ಲಿ ಚರ್ಚೆ ಮಾಡಿ ಅವಕಾಶ ಕೊಡುತ್ತೇನೆ. ವಿಷಯದ ಗಾಂಭೀರ್ಯತೆ ನನಗೆ ಅರ್ಥವಾಗಿದೆ.

ಶ್ರೀ ಕೆ.ಎನ್. ನಾಗೇಗೌಡ : ನಿಮಗೆ ಅವಕಾಶ ಕೊಡಿದಿದ್ದರೆ ಬೇರೆ ಯಾರಿಗೂಕೊಡುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ : ನಾಗೇಗೌಡರಿಗೆ ತಾವು ಕೊಟ್ಟಿರುವ ಅವಕಾಶಗಳಷ್ಟನ್ನು ಯಾರು ಪಡೆದಿಲ್ಲ, ಅವರು ಆರೋಪಣೆ ಮಾಡುತ್ತಿದ್ದಾರೆ. ಅದು ಸರಿಯಲ್ಲ.

ಶ್ರೀ ಕೆ.ಎನ್. ನಾಗೇಗೌಡ : ಆರೋಪಣೆಯಲ್ಲ. ಅವರಿಗೆ ನಿಮ್ಮ ಮೇಲೆ ಬಹಳ ಪ್ರೀತಿ, ತಾವು ಬಹಳ ವಿಶ್ವಾಸಿಗಳು. ಆದ್ದರಿಂದ ತಮಗೆ ಚರ್ಚೆಗೆ ಅವಕಾಶ ಕೊಟ್ಟೇ ಕೊಡುತ್ತಾರೆಂದು ಹೇಳುತ್ತಿದ್ದೇನೆ.

ಅಧ್ಯಕ್ಷರು : ಇಬ್ಬರ ಮೇಲೂ ಪ್ರೀತಿ ಇದೆ.

ಶ್ರೀ ಎನ್. ಯೋಗೀಶ್ ಭಟ್ : ಅಧ್ಯಕ್ಷರೆ, ಮಂಗಳೂರಿನ ಸಬ್‌ಜೈಲ್‌ನಲ್ಲಿ 8 ರೈಫಲ್ ಇದೆ. ಅವುಗಳಿಗೆ ತುಕ್ಕು ಹಿಡಿದು ಉಪಯೋಗ ಮಾಡದ ಸ್ಥಿತಿಯಲ್ಲಿದೆ. ಅದು ಇನ್ನೂ ರಿಪೇರಿಯಾಗಿಬಂದಿಲ್ಲ, ಸನ್ಮಾನ್ಯ ಕಾರಾಗೃಹ ಸಚಿವರಲ್ಲಿ ಕೇಳುವುದೇನೆಂದರೆ. ತಾವು ಸಬ್‌ಜೈಲುಗಳನ್ನು ಕಡೆಗಣಿಸಬೇಡಿ.

ಅಧ್ಯಕ್ಷರು : ಅದು ಬೇರೆ ಪ್ರಶ್ನೆಯಾಗುತ್ತದೆ. ಅದಕ್ಕೆ ಉತ್ತರವನ್ನೆಲ್ಲಿಂದ ತಂದು ಕೊಡುತ್ತಾರೆ?

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಅಧ್ಯಕ್ಷರೆ, ನಾನು 15 ದಿವಸ ಜೈಲಿನಲ್ಲಿದ್ದು ಬಂದವನು, ನಾನು ಒಂದೆರಡು ಮಾತುಗಳನ್ನು ಹೇಳುತ್ತೇನೆ.

ಅಧ್ಯಕ್ಷರು : ನನ್ನ ಆಸೆ, ಇನ್ನು ಮುಂದೆ ನೀವ್ಯಾರೂ ಜೈಲಿಗೆ ಹೋಗಬಾರದೆಂದು.

ಶ್ರೀ ವಾಟಾಳ್ ನಾಗರಾಜ್ : ಇಂಥ ಪರಿಸ್ಥಿತಿಯಲ್ಲಿ ದಯಮಾಡಿ ನಮ್ಮನ್ನು ಯಾವಾಗಲೂ ಜೈಲಿಗೆ ಕಳಿಸಬೇಡಿ.

ಅಧ್ಯಕ್ಷರು : ನಿಮ್ಮನ್ನು ಯಾವ ಸಂದರ್ಭದಲ್ಲೂ ಸಹ ಜೈಲಿಗೆ ಕಳಿಸುವುದಿಲ್ಲವೆಂದು ನಾವು ಮತ್ತು ಬಂಗಾರಪ್ಪನವರು ಮಾತನಾಡಿಕೊಂಡಿದ್ದೇವೆ.

ರಾಜಾಜಿನಗರದ ವಾಟಾಳ್ ನಾಗರಾಜ್ ರಸ್ತೆಯಲ್ಲಿ ಹೆಚ್ಚಿನ ವಾಹನ ಸಂಚಾರ

225 - ಶ್ರೀ ಸುರೇಶ್ ಕುಮಾರ್ ಎಸ್. (ರಾಜಾಜಿನಗರ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ರಾಜಾಜಿನಗರದ ರಾಂಕುಮಾರ್ ಮಿಲ್ಸ್ ಬಳಿ ಇರುವ ಪ್ರವೇಶದ್ವಾರದಿಂದ ನಗರ ರೈಲ್ವೆ ಸ್ಟೇಷನ್ ಮಧ್ಯ ವಾಹನ ಸಂಚಾರ ಬಹಳವಾಗಿ ಹೆಚ್ಚಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಇದನ್ನು ತಡೆಗಟ್ಟಲು ಸರ್ಕಾರದವರು ಕೈಗೊಳ್ಳಲಿರುವ ಕ್ರಮಗಳೇನು. ಈ ಭಾಗದಲ್ಲಿ ಫ್ಲೈಓವರ್ ಅಥವಾ ಸುರಂಗಮಾರ್ಗ ಮಾಡುವ ಯೋಜನೆ ಏನಾದರೂ ಸರ್ಕಾರದವರ ಮುಂದಿದೆಯೇ?

ಶ್ರೀ ಕೆ.ಎಸ್. ಬೀಳಗಿ (ಸಾರಿಗೆ ಸಚಿವರು) :

ಅ) ಬಂದಿದೆ.

ಆ) 1) ರಾಜಾಜಿನಗರ ರಾಂಕುಮಾರ್ ಮಿಲ್ಸ್ ಬಳಿ ಇರುವ ಪ್ರವೇಶದ್ವಾರದಿಂದ ನಗರ ರೈಲ್ವೆ ಸ್ಟೇಷನ್ ಮಧ್ಯೆ ವಾಹನ ಸಂಚಾರ ಬಹಳವಾಗಿ ಜಾಸ್ತಿಯಾಗಿರುತ್ತದೆ. ಈ ರಸ್ತೆಯಲ್ಲಿ ಅಪಘಾತಗಳು ಸಂಭವಿಸುವ ಜಾಗಗಳನ್ನು ಗುರ್ತಿಸಿ ಎಚ್ಚರಿಕೆಯ ನಾಮಫಲಕಗಳನ್ನು ಅಳವಡಿಸಲಾಗಿರುತ್ತೆ.

2) ರಾಜಾಜಿನಗರ ರಾಂಕುಮಾರ್ ಮಿಲ್ಸ್ ಬಳಿ ಇರುವ ಪ್ರವೇಶದ್ವಾರದಿಂದ ನಗರದ ರೈಲ್ವೆ ಸ್ಟೇಷನ್‌ವರೆಗೆ ಈ ರಸ್ತೆಯಲ್ಲಿ ಅತಿ ಮುಖ್ಯವಾದ ವೃತ್ತಗಳಲ್ಲಿ (1) ಫೌಂಟನ್ ಸರ್ಕಲ್ (2) ಪ್ಲಾಟ್‌ಫಾರಂ ಜಂಕ್ಷನ್ (3) ಓಕಳಿಪುರಂ (4) ಮಾಗಡಿ ರೋಡ್ ಜಂಕ್ಷನ್ (5) ರಾಜಾಜಿನಗರ ಮುಖ್ಯದ್ವಾರ ಈ ಸ್ಥಳಗಳಲ್ಲಿ ವಿಕಕಾಲಿಕ ಸ್ವಯಂಚಾಲಿತ ಸಂಚಾರ ದೀಪಗಳನ್ನು ಅಳವಡಿಸಲಾಗಿದೆ. ಈ ರಸ್ತೆಯಲ್ಲಿ ವಿಶೇಷ ಗಮನ ಹರಿಸಿ ಅತಿ ವೇಗ ಮತ್ತು ಅಜಾಗರೂಕತೆಯಿಂದ ವಾಹನಗಳನ್ನು ಚಲಿಸುವ ಚಾಲಕರುಗಳ ವಿರುದ್ಧ ಮೊಕದ್ದಮೆಗಳನ್ನು ದಾಖಲಿಸಿ ಅಪಘಾತಗಳು ಸಂಭವಿಸದಂತೆ ಕ್ರಮ ಕೈಗೊಳ್ಳಲಾಗುತ್ತಿದೆ.

3) ಈ ರಸ್ತೆಯಲ್ಲಿ ಸಿಬ್ಬಂದಿ ವರ್ಗದವರನ್ನು ನೇಮಿಸಿ ಸಂಚಾರಿ ನಿಯಂತ್ರಣವನ್ನು ನೇಮಿಸಿ ಸಂಚಾರಿ ನಿಯಂತ್ರಣವನ್ನು ಮಾಡಲಾಗುತ್ತಿದೆ.